## ಹೈಡ್‌ಐಪಿವಿಪಿಎನ್




ಆನ್‌ಲೈನ್‌ನಲ್ಲಿ ಹುಡುಕಾಡುವಾಗ ನಿಮಗೆ ಭದ್ರತೆ ಒದಗಿಸುವುದಲ್ಲದೇ ನಿಮ್ಮ ಖಾಸಗೀತನ ಕಾಪಾಡುವ ಆ್ಯಪ್ ಇದು. ಡಿವೈಸ್ ಯಾವುದೇ ಇರಲಿ, ಅದಕ್ಕೆ ಹೊಂದಿಕೊಳ್ಳುತ್ತದೆ. ಹೊಸಬರ ಅಗತ್ಯಗಳನ್ನು ಪೂರೈಸುವುದಲ್ಲದೇ, ಅಡ್ವಾನ್ಸ್‌ಡ್ ಬಳಕೆದಾರರಿಗೂ ಹೆಚ್ಚು ಪ್ರಿಯವಾದ ಆ್ಯಪ್ ಇದು. ಅಂತರ್ಜಾಲ ಕಡಿತಗೊಂಡಾಗ ಯಾವ ಆ್ಯಪ್ ತೆರೆಯಬೇಕು ಅಥವಾ ಮುಚ್ಚಬೇಕು ಎಂಬುದನ್ನು ಕಿಲ್ ಸ್ವಿಚ್ ನಿರ್ದೇಶಿಸುತ್ತದೆ. ನಿಮ್ಮ ಆನ್‌ಲೈನ್ ಚಟುವಟಿಕೆಗಳನ್ನು ಬೇರೆಯವರ ಕಣ್ಣಿಂದ ಕಾಪಾಡುತ್ತದೆ. ಐಪಿ ಅಡ್ರೆಸ್ ಅನ್ನು ಕೂಡಾ ಮುಚ್ಚಿಡಬಹುದು.




## ಫೇಸ್‌ಬುಕ್‌ನಲ್ಲಿ ಹೆಸರು ಉಚ್ಚಾರಣೆ

ಈ ಸಾಮಾಜಿಕ ಜಾಲತಾಣದಲ್ಲಿ ನಿಮ್ಮ ಹೆಸರನ್ನು ಸರಿಯಾಗಿ ಉಚ್ಚರಿಸಲು ನಿಮ್ಮ ಸ್ನೇಹಿತರಿಗೆ ನೆರವು ನೀಡುವ ಆಡಿಯೋ ಈಗ ಲಭ್ಯ. ಇದು ನಿಮ್ಮ ಹೆಸರಿನ ಪಕ್ಕ ಕಾಣಿಸಿಕೊಳ್ಳುತ್ತದೆ. ಪ್ರೊಫೈಲ್‌ನಲ್ಲಿ 'ಎಬೌಟ್' ಮೇಲೆ ಕ್ಲಿಕ್ ಮಾಡಿ. 'ಡಿಟೇಲ್ಸ್ ಎಬೌಟ್ ಯೂ' ಆಯ್ಕೆ ಮಾಡಿ. ಅಲ್ಲಿ 'ನೇಮ್ ಪ್ರನೌನ್ಸಿಯೇಶನ್' ಕಾಣಿಸಿಕೊಳ್ಳುತ್ತದೆ. ಜೊತೆಗೆ ಪ್ಲೇ ಬಟನ್ ಇದೆ. ಸದ್ಯ ಇದನ್ನು ಆಯ್ದ ಗುಂಪಿಗೆ ನೀಡಲಾಗಿದ್ದು ಪ್ರಾಯೋಗಿಕವಾಗಿ ಜಾರಿಯಲ್ಲಿದೆ.

## ರೆಡ್‌ಶಿಫ್ಟ್

ಐಪ್ಯಾಡ್‌ನ ಈ ಆ್ಯಪ್ ಖಗೋಳಶಾಸ್ತ್ರದ ಪೂರ್ಣ ವಿವರ ಒದಗಿಸುತ್ತದೆ. ನಕ್ಷತ್ರ, ಗ್ರಹ ಹಾಗೂ ಇನ್ನಿತರ ಬಾಹ್ಯಾಕಾಶದ ವಸ್ತುಗಳ ದೃಶ್ಯಗಳಿಗೆ 3ಡಿ ಪರಿಣಾಮ ನೀಡಬಲ್ಲದು. ಹಗಲು ಹೊತ್ತಿನಲ್ಲೂ ರಾತ್ರಿ ಆಕಾಶದ ದೃಶ್ಯ ಲಭ್ಯ. ಅಡ್ಡ ಗೆರೆಯೊಂದು ಆಕಾಶ ಮತ್ತು ಭೂಮಿಯನ್ನು ಪ್ರತ್ಯೇಕಿಸುತ್ತದೆ. ಭೂಮಿಯ ಮೇಲೆ ಹುಲ್ಲು, ಮರಳು, ಸರೋವರಗಳ ದೃಶ್ಯವನ್ನು ನೋಡುವುದರ ಜೊತೆಗೆ ನಕ್ಷತ್ರಗಳ ಮಿನುಗುವಿಕೆಯನ್ನೂ ಸವಿಯಬಹುದು. ನಕ್ಷತ್ರದ ಮೇಲೆ ಕುಟ್ಟಿದರೆ ಕೆಂಪು ಬಣ್ಣದ ವೃತ್ತ ಕಾಣಿಸಿಕೊಂಡು ಆ ನಕ್ಷತ್ರದ ಹೆಸರು ಬರುತ್ತದೆ. ಹೆಸರಿನ ಪಕ್ಕ ಮಾಹಿತಿಯೂ ಗೋಚರಿಸುತ್ತದೆ.





## ಐಒಎಸ್‌ನಲ್ಲಿ ವೈಸ್ ಕಾಲಿಂಗ್

ಆ್ಯಂಡ್ರಾಯ್ಡ್ ಬಳಕೆದಾರರಿಗೆ ಈಗಾಗಲೇ ವಾಟ್ಸ್‌ಆ್ಯಪ್‌ನಲ್ಲಿ ವೈಸ್ ಕಾಲಿಂಗ್ ಸೌಲಭ್ಯ ನೀಡಲಾಗಿದೆ. ಈ ಸವಲತ್ತು ಆ್ಯಪಲ್ ಐಫೋನ್‌ನಲ್ಲೂ ಲಭ್ಯವಾಗಲಿದೆ. ಇದು ಡೇಟಾ ಶುಲ್ಕವನ್ನು ಬಳಸಿಕೊಳ್ಳುತ್ತದೆ. ಐಒಎಸ್8 ಬಳಕೆದಾರರು ಫೋಟೊ, ವಿಡಿಯೋ, ಲಿಂಕ್ ಮೊದಲಾದವುಗಳನ್ನು ಇದರಲ್ಲಿ ಶೇರ್ ಮಾಡಿಕೊಳ್ಳಬಹುದು. ವಾಟ್ಸ್‌ಆ್ಯಪ್ ಮೂಲಕ ಕಾಂಟ್ಯಾಕ್ಟ್‌ಗಳನ್ನು ಕೂಡಾ ಎಡಿಟ್ ಮಾಡಬಹುದು. ಒಂದಕ್ಕಿಂತ ಹೆಚ್ಚು ವಿಡಿಯೋಗಳನ್ನು ಒಟ್ಟಿಗೆ ಕಳಿಸಬಹುದು. ಶೀರ್ಷಿಕೆ ನೀಡಬಹುದು. ವಿಡಿಯೋ ಕ್ರಾಪ್ ಹಾಗೂ ರೊಟೇಟ್ ಮಾಡಬಹುದು.

■ ಎಸ್. ತುಂಬೆ